ಕ್ರ ಸಂ	ಹೆಸರು	ವೇತನ ಶ್ರೇಣಿ (ರೂ ಗಳಲ್ಲಿ)	ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಎಷ್ಟು ವರ್ಷಗಳಿಂದ
12	ಮಂಜುನಾಥ್, ಎಸ್ ಪಿ ವಾಣಿಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	10000–15300	ಜೆ ಎಸ್ ಎಸ್ ವಿದ್ಯಾಪೀಠ, ಮೈಸೂರು	6 ತಿಂಗಳುಗಳಿಂದ
13	ಶಿವಕುಮಾರಸ್ವಾಮಿ ಎಸ್ ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು	12000–18300	ಜೆ ಎಸ್ ಎಸ್ ವಿದ್ಯಾಪೀಠ, ಮೈಸೂರು	6 ತಿಂಗಳುಗಳಿಂದ

505(931) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ನಿವೇಶನ/ಮನೆಗಳು/ ಫ್ಲಾಟ್‌ಗಳಿಗಾಗಿ ಅರ್ಜಿಗಳನ್ನು ಯಾವಾಗ ಕರೆಯಲಾಗಿದೆ,

ಆ) ಇದಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ, ಅರ್ಜಿಗಳ ಜೊತೆಯಲ್ಲಿ ಬಂದಿರುವ ರೇವಣಿ ಹಣವೆಷ್ಟು, (ಪ್ರತಿ ಸ್ಥಳದ ಬಗ್ಗೆ ವಿವರಗಳನ್ನು ಒದಗಿಸುವುದು)

ಇ) ಈ ಸಂಬಂಧವಾಗಿ ಮಂಜೂರಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ,

ಈ) ಎಷ್ಟು ಸಮಯದಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು, ಯಾವ ಯಾವ ಕೋಟಾದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಇವುಗಳನ್ನು ಹಂಚಿಕೆ ಮಾಡಲಾಗುವುದು, ಇದಕ್ಕಾಗಿ ಇಲ್ಲಿಯವರೆವಿಗೆ ವಿವಿಧ ಗಣ್ಯರಿಂದ ಬಂದಿರುವ ಶಿಫಾರಸ್ಸುಗಳ ವಿವರಗಳೇನು,

ಉ) ಮಂಜೂರಾತಿ ಪ್ರಕ್ರಿಯೆ ತಡವಾಗುತ್ತಿರಲು ಕಾರಣಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಎ) ಬೆಂಗಳೂರು ನಗರ ಜಿಲ್ಲೆಯ ಸೂರ್ಯನಗರ ಮತ್ತು ಬಂಡೇಮರ ಯೋಜನೆಗಳಿಗೆ ದಿನಾಂಕ 3 9 2006ರಂದು ನಿವೇಶನ/ಮನೆಗಳು/ ಫ್ಲಾಟ್‌ಗಳ ಹಂಚಿಕೆಗಾಗಿ ಅರ್ಜಿಗಳನ್ನು ಕರೆಯಲಾಗಿದೆ

ಬಿ) ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ

1) ಚನ್ನಪಟ್ಟಣ 2) ರಾಮನಗರ 3) ಬಿಡದಿ 4) ನೆಲಮಂಗಲ 5) ಕನಕಪುರ ಮತ್ತು 6) ದೊಡ್ಡಬಳ್ಳಾಪುರ ಯೋಜನೆಗಳಿಗಾಗಿ ಬೇಡಿಕೆಯ ಸಮೀಕ್ಷೆಯನ್ನು ದಿನಾಂಕ 18 2006ರಂದು ಕರೆಯಲಾಗಿದೆ

ಆ) ಎ) ಬೆಂಗಳೂರು ನಗರ ಜಿಲ್ಲೆಯ ಸೂರ್ಯನಗರ ಮತ್ತು ಬಂಡೇಮರ ಯೋಜನೆಗಳ ಸ್ವತ್ತುಗಳನ್ನು ಹಂಚಿಕೆ ಮಾಡಲು ಅರ್ಜಿಯನ್ನು ಕರೆದಿದ್ದು ಆರಂಭಿಕ ರೇವಣಿಯೊಂದಿಗೆ ಬಂದಿರುವ ಅರ್ಜಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ

ಯೋಜನೆಯ ಹೆಸರು	ಅರ್ಜಿಗಳು	ಆರಂಭಿಕ ರೇವಣಿ
ಸೂರ್ಯನಗರ	39723	188,65,98,576 00
ಬಂಡೇಮರ	10480	43,74,33,906 00
ಒಟ್ಟು	**50203**	**232,40,32,482 00**

ಬಿ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯೋಜನೆಗಳಿಗೆ ಬೇಡಿಕೆಯ ಸಮೀಕ್ಷೆ ಕರೆಯಲಾಗಿದ್ದು ನೋಂದಣಿ ಶುಲ್ಕದೊಂದಿಗೆ ಬಂದಿರುವ ಅರ್ಜಿಗಳು

ಯೋಜನೆಯ ಹೆಸರು	ಅರ್ಜಿಗಳು	ನೋಂದಣಿ ಶುಲ್ಕ
ಚನ್ನಪಟ್ಟಣ	2250	10,26,150 00
ರಾಮನಗರ	2258	20,29,900 00
ಬಿಡದಿ	7094	58,17,700 00
ನೆಲಮಂಗಲ	10218	80,94,900 00
ಕನಕಪುರ	1307	9,97,850 00
ದೊಡ್ಡಬಳ್ಳಾಪುರ	5470	46,59,500 00
ಒಟ್ಟು	**28597**	**2,26,26,000 00**

ಇ) ಎ) ಸೂರ್ಯನಗರ ಮತ್ತು ಬಂಡೇಮರ ಯೋಜನೆಗಳ ಹಂಚಿಕೆಯನ್ನು ಮಾಡುವ ಸಲುವಾಗಿ ಅರ್ಜಿಗಳ ಪರಿಶೀಲನೆಯು ನಡೆಯುತ್ತಿದೆ

ಬಿ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೇಡಿಕೆಯ ಸಮೀಕ್ಷೆಯ ಸ್ಥಳಗಳಲ್ಲಿ ಜಮೀನನ್ನು ಗುರುತಿಸಲಾಗುತ್ತಿದೆ

ಈ) ಸೂರ್ಯನಗರ ಮತ್ತು ಬಂಡೇಮರ ಯೋಜನೆಗಳ ಹಂಚಿಕೆಯನ್ನು ಶೀಘ್ರದಲ್ಲಿ ಹಂಚಿಕೆಯನ್ನು ಮಾಡಲಾಗುವುದು ಪ್ರವರ್ಗವಾರು ತಯಾರಿಸಿ ಹಂಚಿಕೆಯನ್ನು ಮಾಡಲಾಗುವುದು ಶೇಕಡವಾರು ವಿವರಗಳು ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ಪ್ರವರ್ಗ	ಶೇಕಡವಾರು
1	ಪ ಜಾತಿ/ಪ ಪಂಗಡ/ಹಿ ಗುಂಪು	18%
2	ಮಾಜಿ ಸೈನಿಕರು/ರಕ್ಷಣಾ ಸಿಬ್ಬಂದಿ	5%
3	ಕೇಂದ್ರ ಸರ್ಕಾರಿ ನೌಕರರು	5%
4	ರಾಜ್ಯ ಸರ್ಕಾರಿ ನೌಕರರು	15%
5	ಅಂಗವಿಕಲರು	3%
6	ಹಿರಿಯ ನಾಗರೀಕರು	5%
7	ಇತರರು	49%

ಇಲ್ಲಿಯವರೆವಿಗೆ ವಿವಿಧ ಗಣ್ಯ ವ್ಯಕ್ತಿಗಳಿಂದ ಬಂದಿರುವ ಶಿಫಾರಸ್ಸುಗಳು ಈ ಕೆಳಕಂಡಂತಿದೆ

ಯೋಜನೆ ಹೆಸರು	ಶಿಫಾರಸ್ಸು ಅರ್ಜಿಗಳು
ಸೂರ್ಯನಗರ	372
ಬಂಡೇಮರ	76
ನೆಲಮಂಗಲ (ಬೇಡಿಕೆ ಸಮೀಕ್ಷೆ)	43

ಉ) ಎ) ರಾಜ್ಯದ ವಿವಿಧ ಭಾಗದ ಜನರು ಅರ್ಜಿಯನ್ನು ನೋಂದಾಯಿಸಿದ್ದು ಹೆಚ್ಚು ಅರ್ಜಿಗಳು ಬಂದಿರುವುದರಿಂದ ಪರಿಶೀಲಿಸಲಾಗುತ್ತಿದೆ ಶೀಘ್ರವಾಗಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

ಬಿ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೇಡಿಕೆಯ ಸಮೀಕ್ಷೆಯನ್ನು ಕರೆಯಲಾದ ಸ್ಥಳಗಳಲ್ಲಿ ಜಮೀನನ್ನು ಗುರುತಿಸಲಾಗುತ್ತಿದೆ

507(933) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಸವಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು,

ಆ) ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆ ಎಷ್ಟು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರಿದ್ದಾರೆಯೇ, ಒಂದು ವೇಳೆ ಶಿಕ್ಷಕರ ಕೊರತೆ ಇದ್ದಲ್ಲಿ ಎಷ್ಟು ಶಿಕ್ಷಕರ ಕೊರತೆ ಇದೆ,

ಇ) ನಿಯಮಗಳ ಪ್ರಕಾರ 40 ವಿದ್ಯಾರ್ಥಿಗಳಿಗೆ ಒಂದು ವಿಭಾಗವನ್ನು (ಸೆಕ್ಷನ್) ತೆರೆಯುವುದು ನಿಜವಲ್ಲವೆ,

ಈ) ಹಾಗಿದ್ದಲ್ಲಿ, 40 ಜನ ವಿದ್ಯಾರ್ಥಿಗಳಿಗೆ ಮೇಲ್ಪಟ್ಟು ಇರುವ ವಿಭಾಗಗಳ ಸಂಖ್ಯೆ ಎಷ್ಟು, ಈ ಪ್ರತಿ ವಿಭಾಗಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಉ) 40ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ವಿಭಾಗಗಳನ್ನು ಪುನರ್ ವಿಂಗಡಿಸಿ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾದಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಪ್ರೌಢಶಾಲೆಗಳು 27, ಪ್ರಾಥಮಿಕ ಶಾಲೆಗಳು 204
ಅನುದಾನಿತ ಪ್ರಾಥಮಿಕ ಶಾಲೆಗಳು 21
ಅನುದಾನಿತ ಪ್ರೌಢಶಾಲೆಗಳು 09